ಟೊಂಯಾನ ಹೆಂಡತಿ ಏನೋ ನಿರ್ಧಾರ ತೆಗೆದುಕೊಂಡವಳಂತೆ ಗಾಢವಾಗಿ ಯೋಚಿಸುತ್ತಾ ಹೊರಗೆ ಹೋದಳು.

ಇದಾದ ಎಂಟು ದಿನಗಳ ನಂತರ ಟೊಂಯಾನ ಹೆಂಡತಿ ಅವನ ಹಾಸಿಗೆಯ ಬಳಿ ಬಂದು, 'ಮೂರು ಕಾಸಿಗೂ ಲಾಯಕ್ಕಿಲ್ಲದವನೇ ಇಲ್ಲಿ ಕೇಳು!' ಎಂದಳು. ಮುಂದುವರೆಸುತ್ತಾ, 'ಇವತ್ತು ನಾನು ಹಳದಿ ಕೋಳಿಗೆ ಮರಿ ಮಾಡಿಸಲು ಕುಳ್ಳಿರಿಸಿದ್ದೇನೆ. ನಿನಗೂ ಹತ್ತು ಮೊಟ್ಟೆಗಳನ್ನು ತಂದಿದ್ದೇನೆ. ಎಲ್ಲಾದ್ರೂ ಒಡೆದು ಹಾಕಿದ್ರೆ ಗ್ರಾಚಾರ ಬಿಡಿಸುತ್ತೇನೆ!' ಎಂದಳು.

ಕೇಳಿ, ಟೊಂಯಾ ಕಕ್ಕಾಬಿಕ್ಕಿಯಾದ. 'ಲೇ ಪಿಶಾಚಿ, ನಿನ್ನ ತಲೆ ಸರಿ ಇದೆ ತಾನೆ?' ಅವನ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು.

'ನೀನು ಈ ಮೊಟ್ಟೆಗಳಿಂದ ಮರಿ ತೆಗೆಯಬೇಕು, ಅಷ್ಟೇ!'

ಟೊಂಯಾ, ಗಂಭೀರಗೊಳ್ಳುತ್ತಿರುವ ಪರಿಸ್ಥಿತಿಯನ್ನು ತುಚ್ಛಗೊಳಿಸಲು ಎಷ್ಟು ಜೋರಾಗಿ ನಗಬಹುದೋ ಅಷ್ಟು ಜೋರಾಗಿ ನಕ್ಕ. ಆದರೂ ಅವನ ಹೆಂಡತಿಯ ಗಂಭೀರ ಮುಖಚರ್ಯೆಯನ್ನು ಗಮನಿಸಿ ಅವನ ಸಿಟ್ಟು ನೆತ್ತಿಗೇರಿತು. ಅವನ ಬಾಹುಗಳ ಕೆಳಗೆ ಮೊಟ್ಟೆಗಳನ್ನು ಕಾವಿಗಿಡಿಸಲು ಅವನು ಸುತರಾಂ ಒಪ್ಪಲಿಲ್ಲ.

ಅವನ ಹಟ ಅವಳ ಮುಂದೆ ಎಷ್ಟೂ ನಡೆಯಲಿಲ್ಲ. ಅವಳು ಅಂತಿಮ ಎಚ್ಚರಿಕೆಯನ್ನು ಕೊಟ್ಟಳು: 'ನೀನು ಕಾವಿಗೆ ಕೂರದಿದ್ದರೆ ಹೊಟ್ಟೆಗೆ ಹಿಟ್ಟಿಲ್ಲ!' ಎಂದು ಬಿಟ್ಟಳು. ಟೊಂಯಾ, ಇದು ಟೊಳ್ಳು ಬೆದರಿಕೆ ಎಂದು ನಂಬುವಷ್ಟು ಮೂರ್ಖನಾಗಿರಲಿಲ್ಲ. ಆದರೂ,

ಗಂಟೆ ಹನ್ನೆರಡಾಗುವವರೆಗೂ ಟೊಂಯಾ ಪ್ರತಿಭಟಿಸಿದ. ಮುಂದೆ ಅವನಿಂದ ತಡೆಯಲಾಗಲಿಲ್ಲ. 'ಲೇ!...' ಅವನು ಆಕ್ರಂದಿಸಿದ.

'ನೀನು ಹೊಟ್ಟೆಬಾಕ ಹಂದಿ. ನಿನಗಿವತ್ತು ಊಟ ಇಲ್ಲ. ಉಪವಾಸ ಮಾಡು. ಜೀವಕ್ಕೊಳ್ಳೇದು.' ಅಡುಗೆ ಕೋಣೆಯಿಂದ ಅವನ ಹೆಂಡತಿಯ ಉತ್ತರ ತೇಲಿ ಬಂತು.

ಮೊದಮೊದಲು ಹೆಂಡತಿ

